

# ಕೈಗೆಟಕುವ ವಜ್ರದ ನೆಕ್ಲೆಸ್

**ವಜ್ರಾಭರಣಗಳು ದುಬಾರಿ ಎನಿಸಿದರೂ ತಿಜೋರಿಯಲ್ಲಿ ಒಂದಾದರೂ ವಜ್ರದ ಒಡವೆ ಇರಬೇಕು ಎಂಬ ತವಕ ಮಹಿಳೆಯರಿಗೆ. ಇವರ ಮನದಿಂಗಿತ ಅರಿತ ವಜ್ರಾಭರಣ ಮಳಿಗೆ ಮಾಲೀಕರು ಮಧ್ಯಮ ವರ್ಗದವರಿಗೂ ಕೈಗೆಟಕುವ ದರದಲ್ಲಿ ವಜ್ರದ ಆಭರಣ ತಯಾರಿಸಿ ಹೆಂಗಳೆಯರ ಆಸೆ ಪೂರೈಸುತ್ತಿದ್ದಾರೆ. ಇದು ಗ್ರಾಹಕರ ಮನಸ್ಸನ್ನು ಸೆಳೆಯುವ ಮಾರುಕಟ್ಟೆ ತಂತ್ರವೂ ಹೌದು.**

■ ಉಮಾ

ವಜ್ರ, ಚಿನ್ನದ ಒಡವೆಗಳು ಎಂದರೆ ಯಾವ ಹೆಣ್ಣಿಗೆ ತಾನೇ ಕಣ್ಣುಗಳು ಅರಳಲ್ಲ ಹೇಳಿ? ಎಷ್ಟೇ ಆಭರಣಗಳ ಸೆಟ್ ಇದ್ದರೂ 'ಇಷ್ಟು ದೊರಕಿದರೆ ಮತ್ತಷ್ಟು ಬೇಕೆಂಬಾಸೆ..' ಈ ಮಹಿಳೆಯರಿಗೆ. ಚಿನ್ನದ ನೆಕ್ಲೆಸ್ ಇದ್ದರೆ ಮುತ್ತು, ಹವಳಗಳ ನೆಕ್ಲೆಸ್ ಪಡೆಯುವ ಹಂಬಲ. ವಜ್ರದ ಒಡವೆಗಳು ಇದ್ದರೂ ನೆಕ್ಲೆಸ್ ಇದ್ದರೆ ಚೆನ್ನ; ಅದನ್ನೂ ಪಡೆಯಬೇಕು ಎನ್ನುವ ತವಕ.

ಈ ಉತ್ಸಾಹ, ತವಕ, ಆಸೆ ಎಷ್ಟೇ ಇದ್ದರೂ ವಜ್ರದ ಆಭರಣ ದುಬಾರಿ ಎನ್ನುವ ವಿಚಾರವೂ ಮಹಿಳೆಯ ಮನಸ್ಸನ್ನು ಜಾಗ್ರತಗೊಳಿಸುತ್ತದೆ. ಆದರೆ ಇದೀಗ ವಜ್ರದ ನೆಕ್ಲೆಸ್ ಕೂಡ ಮಧ್ಯಮ ವರ್ಗದ ಮಹಿಳೆಯರಿಗೆ ಕೈಗೆಟುಕುವಂತಿದೆ. ವಜ್ರಾಭರಣಗಳಿಗೆ ಹೆಸರಾದ ಕೀರ್ತಿಲಾಲ್ಸ್ ಇದೀಗ ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ವಜ್ರದ ನೆಕ್ಲೆಸ್ ಅನ್ನು ವಜ್ರಾಕಾಂಕ್ಷಿ ಮಹಿಳೆಯರಿಗಾಗಿಯೇ ತಯಾರಿಸಿದೆ. ಕೇವಲ 77 ಸಾವಿರ ರೂಪಾಯಿಗಳಿಗೆ ಕಣ್ಮನ ಸೆಳೆಯುವ ವಜ್ರದ ನೆಕ್ಲೆಸ್ ಅನ್ನು ಅನಾವರಣಗೊಳಿಸಿದೆ. ಹಲವು ವಿನ್ಯಾಸಗಳಲ್ಲಿ ಸಿಗುವ ಈ ವಜ್ರದ ನೆಕ್ಲೆಸ್ ಯುವತಿಯರನ್ನು, ಆಧುನಿಕ ಮನೋಭಾವದ ಮಹಿಳೆಯರನ್ನು ತಕ್ಷಣ ಸೆಳೆಯುವಂತಿದೆ.

ಹೊಸ ಪೀಳಿಗೆಯ ಖರೀದಿದಾರರಲ್ಲಿ ವಜ್ರಾಭರಣ ಬೇಡಿಕೆಯು ಹೆಚ್ಚುತ್ತಿದೆ, ಆದರೆ ಅದರ ಬೆಲೆ ಸದಾ ಕಳವಳಕ್ಕೆ ಕಾರಣವಾಗಿದೆ. ಇದನ್ನು ಸರಿದೂಗಿಸಲು ಪ್ರಯತ್ನಿಸಿದ ವಜ್ರಾಭರಣಗಳಿಗೇ ಹೆಸರಾದ ಕೀರ್ತಿಲಾಲ್ಸ್ ಹೊಸ ಶ್ರೇಣಿಯ ನೆಕ್ಲೆಸ್‌ಗಳನ್ನು ಹೊರತಂದಿದೆ. ಗ್ರಾಹಕರು ವಜ್ರಾಭರಣವನ್ನು ಸಾಂದರ್ಭಿಕವಾಗಿ ಧರಿಸುವ ಬದಲು ಪ್ರತಿದಿನ ಧರಿಸಲು ಹೆಚ್ಚು ಒಲವು ತೋರುತ್ತಿದ್ದಾರೆ. ವಿನ್ಯಾಸಕರು ಹೊಸ ತಲೆಮಾರಿನ ಮಹಿಳೆಯರ ಆಯ್ಕೆಯ ಲಕ್ಷಣಗಳನ್ನು ಅಧ್ಯಯನ ಮಾಡಲು ಮತ್ತು ಅವರಿಗೆ ಒಂದು ಅನ್ವೇಷಣಾತ್ಮಕ ಶೈಲಿಯಲ್ಲಿ ಪ್ರಸ್ತುತಪಡಿಸಲು ಜಗತ್ತಿನಾದ್ಯಂತ ಪ್ರವಾಸ ಮಾಡಿ ಈ ಆಕರ್ಷಕ ವಿನ್ಯಾಸಗಳ ನೆಕ್ಲೆಸ್‌ಗಳನ್ನು ತಯಾರಿಸಿದ್ದಾರೆ ಎನ್ನುತ್ತಾರೆ ಕೀರ್ತಿಲಾಲ್ಸ್‌ನ ಮಾರುಕಟ್ಟೆ ವಿಭಾಗದ ಮುಖ್ಯಸ್ಥರಾದ ಅರುಣ್ ಕುಮಾರ್.

'ವಜ್ರದ ಆಭರಣಕ್ಕೆ ಹೋಲಿಸಿದರೆ ಚಿನ್ನಾಭರಣವು ಹೆಚ್ಚು ಕೈಗೆಟಕುತ್ತದೆ ಎಂಬ ಗ್ರಹಿಕೆ ಇದೆ. ವಜ್ರವನ್ನು ಖರೀದಿಸುವುದೆಂದರೆ ಅದರ ಮೌಲ್ಯಕ್ಕಿಂತ ಅದರೊಂದಿಗಿನ ಭಾವನೆಗಳಿಗೆ ಹೆಚ್ಚು ಸಂಬಂಧಪಟ್ಟಿದ್ದಾಗಿರುತ್ತದೆ. ಮೊದಲ ಡೈಮಂಡ್ ನೆಕ್ಲೆಸ್ ಹೊಂದುವುದು ಹೊಸ ತಲೆಮಾರಿನ ಗ್ರಾಹಕರಿಗೆ ಅವಿಸ್ಮರಣೀಯವಾಗುತ್ತದೆ' ಎಂದು ಅವರು ಹೇಳುತ್ತಾರೆ.



## ಸಿಂಗಲ್‌ಪೀಸ್ ಟ್ರೆಂಡ್

ವಜ್ರದ ಒಡವೆಗಳಲ್ಲಿ ಸಿಂಗಲ್ ಪೀಸ್ ಒಡವೆ ಇಂದಿನ ಟ್ರೆಂಡ್. ವಿವಿಧ ಬಗೆಯ ಹತ್ತಾರು ಆಭರಣಗಳನ್ನು ಹೇರಿಕೊಳ್ಳುವ ಬದಲಿಗೆ ಒಂದೇ ಒಂದು ಸುಂದರವಾದ ಆಭರಣ ಧರಿಸುವುದು ಈಗೀಗ ಹೆಚ್ಚು ಜನಪ್ರಿಯವಾಗುತ್ತಿದೆ. ವಜ್ರದ ಉಂಗುರ, ಕಿವಿಯೋಲೆ, ನೆಕ್ಲೆಸ್‌ಗಳಿಗೆ ಇಂದಿನ ಫ್ಯಾಷನ್ ಪ್ರಪಂಚದಲ್ಲಿ ಎಲ್ಲಿಲ್ಲದ ಬೇಡಿಕೆ. ಇದೇ ಇಂದಿನ ಟ್ರೆಂಡ್ ಕೂಡ ಆಗಿದೆ.

ವೈವಿಧ್ಯಮಯ ವಿನ್ಯಾಸದ ವಜ್ರಾಭರಣ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿಯೂ ಇದ್ದು